# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **580 (604)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಸಿ.ಟಿ ರವಿ (ವಿಧಾನಸಭೆಯಿಂದ ಚುನಾಯಿತರಾದರು)** |
| **ಉತ್ತರಿಸಬೇಕಾದ ದಿನಾಂಕ** | **22.07.2024** |
| **ಉತ್ತರಿಸುವ ಸಚಿವರು** | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು** |

*****

| **ಕ್ರ. ಸಂ** | **ಪ್ರಶ್ನೆ** | **ಉತ್ತರ** |
|---|---|---|
| **ಅ** | ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಡೆಂಗ್ಯೂ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಜೂನ್ 2024 ಅಂತ್ಯಕ್ಕೆ ಎಷ್ಟು ಡೆಂಗ್ಯೂ ಪ್ರಕರಣಗಳು ವರದಿಯಾಗಿವೆ; ಮೃತಪಟ್ಟವರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಬಂದಿದೆ.<br><br>ರಾಜ್ಯದಲ್ಲಿ ಜೂನ್ 2024 ರ ಅಂತ್ಯಕ್ಕೆ ವರದಿಯಾಗಿರುವ ಡೆಂಗ್ಯೂ ಪ್ರಕರಣಗಳ ವಿವರಗಳನ್ನು **ಅನುಬಂಧ – 1**ರಲ್ಲಿ ನೀಡಲಾಗಿದೆ.<br><br>2024ರ ಜೂನ್ ಅಂತ್ಯದವರೆಗೆ ಒಟ್ಟು 07 ದೃಡಪಟ್ಟ ಡೆಂಗ್ಯೂ ಮರಣಗಳು ವರದಿಯಾಗಿರುತ್ತವೆ. ವಿವರಗಳು ಈ ಕೆಳಗಿನಂತಿವೆ. |

| **Sl No** | **Districts** | **No of Deaths** |
|---|---|---|
| 1 | Hassan | 2 |
| 2 | Dharwad | 1 |
| 3 | Haveri | 1 |
| 4 | Shivamogga | 1 |
| 5 | Mysuru | 1 |
| 6 | BBMP | 1 |
| | Total | 7 |

| | | |
|---|---|---|
| ಆ | ಡೆಂಗ್ಯೂ ಮಾರಣಾಂತಿಕವಾಗಿದ್ದು, ಇದರ ತಡೆಗೆ ಸರ್ಕಾರ ಕೈಗೊಂಡಿರುವ ಜಾಗೃತಿ ಹಾಗೂ ಮುನ್ನೆಚ್ಚರಿಕೆ ಕ್ರಮಗಳೇನು; ಕಳೆದ ಒಂದು ವರ್ಷದಿಂದ ಡೆಂಗ್ಯೂ ತಡೆಗಟ್ಟಲು ಸರ್ಕಾರ ವೆಚ್ಚ ಮಾಡಿರುವ ಹಣ ಎಷ್ಟು | ರಾಜ್ಯದಲ್ಲಿ ಡೆಂಗ್ಯೂ ನಿಯಂತ್ರಣಕ್ಕೆ ಕೈಗೊಂಡ ಜಾಗೃತಿ ಹಾಗೂ ಮುನ್ನೆಚ್ಚರಿಕೆ ಕ್ರಮಗಳು:-<br><br>1. ಬಹುತೇಕ ಸಾಮಾನ್ಯ ಡೆಂಗ್ಯೂ ಜ್ವರ ಪ್ರಕರಣಗಳು ಅಗತ್ಯ ಚಿಕಿತ್ಸೆ, ವಿಶ್ರಾಂತಿ ಹಾಗೂ ಸಾಕಷ್ಟು ದ್ರವ ಆಹಾರ ಸೇವನೆಯಿಂದ ಗುಣಮುಖವಾಗುತ್ತದೆ. ಆದರೆ, ಜ್ವರದಿಂದ ಗುಣಮುಖವಾಗಿ 4-5 ದಿನಗಳ ನಂತರ ಚರ್ಮದ ಮೇಲೆ ಗಂದೆಗಳು, ಹೊಟ್ಟೆ ನೋವು, ತೀವ್ರ ನಿಶ್ಯಕ್ತಿ, ರಕ್ತದ ಒತ್ತಡದಲ್ಲಿ ಕುಸಿತ ಹಾಗೂ ಕೈ-ಕಾಲು ತಣ್ಣಗಾಗುವುದು, ಈ ಲಕ್ಷಣಗಳು ಕಂಡುಬಂದಲ್ಲಿ, ಇವು ಡೆಂಗ್ಯೂ ತೀವ್ರ ಸ್ವರೂಪದ ಲಕ್ಷಣಗಳಾಗಿವೆ. ಆದ್ದರಿಂದ, ಮೇಲಿನ ಲಕ್ಷಣಗಳು ಕಂಡು ಬಂದ ತಕ್ಷಣವೇ ನಿರ್ಲಕ್ಷಿಸದೆ, ವೈದ್ಯರನ್ನು ಭೇಟಿಮಾಡಲು ತಿಳಿಸಲಾಗಿದೆ.<br>2. ಡೆಂಗ್ಯೂ ಜ್ವರ ಮುನ್ನೆಚ್ಚರಿಕೆ ಕ್ರಮವಾಗಿ, ಆರೋಗ್ಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ (ಗ್ರಾಮೀಣ ಪ್ರದೇಶ) ಪ್ರತಿದಿನ ಈ ಡಿಸ್ಲಾರ್ವಾ ಸಮೀಕ್ಷೆ ಹಾಗೂ ಉತ್ಪತ್ತಿ ತಾಣ ನಾಶ ಚಟುವಟಿಕೆಯನ್ನು ನಡೆಸುತಿದ್ದು ಡೆಂಗ್ಯೂ ಜ್ವರದ ಬಗ್ಗೆ ಸಮುದಾಯಕ್ಕೆ ಆರೋಗ್ಯ ಶಿಕ್ಷಣವನ್ನು ನೀಡುತ್ತಿದ್ದಾರೆ.<br>3. ಪಟ್ಟಣ ಪ್ರದೇಶಕ್ಕೆ ಗ್ರಾಮೀಣ ಪ್ರದೇಶದ ಆರೋಗ್ಯ ಕಾರ್ಯಕರ್ತರನ್ನು ಮೊದಲನೇ ಹಾಗೂ ಮೂರನೇ ಶುಕ್ರವಾರ ನಿಯೋಜಿಸಿ ಈಡಿಸ್ ಲಾರ್ವಾ ನಿರ್ಮೂಲನೆಯನ್ನು ನಡೆಸಲಾಗುತ್ತಿದೆ.<br>4. ಡೆಂಗ್ಯೂ ನಿಯಂತ್ರಣದಲ್ಲಿ ಸಾರ್ವಜನಿಕರ ಪಾತ್ರವು ಮಹತ್ವದ್ದಾಗಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಪ್ರತಿ ಶುಕ್ರವಾರ :ಲಾರ್ವಾ ನಿರ್ಮೂಲನಾ ದಿನವನ್ನಾಗಿ ಆಚರಿಸಲಾಗುತ್ತಿದೆ. ಈ ದಿನ ಸಾರ್ವಜನಿಕರು ತಮ್ಮ ಮನೆಯ ಒಳಾಂಗಣ, ಮತ್ತು ಹೊರಾಂಗಣದಲ್ಲಿ ಹಾಗೂ ಸಿಬ್ಬಂದಿಗಳು ತಾವು ಕರ್ತವ್ಯ ನಿರ್ವಹಿಸುವ ಸ್ಥಳಗಳಲ್ಲಿ ಲಾರ್ವಾ ನಿರ್ಮೂಲನೆ ಮಾಡುವಂತೆ ಮಾಹಿತಿಯನ್ನು ಪ್ರಚುರಪಡಿಸಲಾಗಿದೆ.<br>5. ಡೆಂಗ್ಯೂ ಜ್ವರ ಪ್ರಕರಣಗಳು, High larva index, ಶಂಕಿತ ಡೆಂಗ್ಯೂ ಮರಣಗಳು ವರದಿಯಾದ ಗ್ರಾಮದಲ್ಲಿ / ವಾರ್ಡನಲ್ಲಿ Indoor space spray ಕೈಗೊಳ್ಳಲು ಸೂಚಿಸಲಾಗುತ್ತಿದೆ.<br>6. ಅಗತ್ಯ ಪ್ರಮಾಣದ ಲಾರ್ವಾ ನಾಶಕ ಹಾಗೂ ಫಾಗಿಂಗ್ ರಾಸಾಯನಿಕವು ಎಲ್ಲಾ ಹಂತದಲ್ಲಿಯೂ ಲಭ್ಯವಿರುವಂತೆ ಕ್ರಮವಹಿಸಲಾಗಿದೆ.<br>7. ಸಾರ್ವಜನಿಕರು ಸ್ವಯಂ ರಕ್ಷಣಾ ವಿಧಾನಗಳನ್ನು ಅನುಸರಿಸುವಂತೆ ಹಾಗೂ ಕರ ಪತ್ರಗಳು, ದೃಶ್ಯ ಮಾಧ್ಯಮಗಳ ಮೂಲಕ, ದಿನ ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಿಸಿ ಡೆಂಗ್ಯೂ ನಿಯಂತ್ರಣ ಕ್ರಮಗಳ |

| | | |
|---|---|---|
| | | ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ.<br>8. ಪ್ರೌಢ ಶಾಲಾ ವಿಜ್ಞಾನ ಶಿಕ್ಷಕರು, ಪಿಡಿಒಗಳಿಗೆ ಡೆಂಗ್ಯೂ ನಿಯಂತ್ರಣದಲ್ಲಿ ಸದರಿಯವರ ಪಾತ್ರ ಹಾಗೂ ತೊಡಗಿಸಿಕೊಳ್ಳುವಿಕೆಯ ಕುರಿತು ಅಡ್ವೊಕೆಸಿ ಕಾರ್ಯಗಾರಗಳನ್ನು ನಡೆಸಲಾಗಿದೆ.<br>9. ಹೆಚ್ಚು ಜ್ವರ ಪ್ರಕರಣಗಳು ವರದಿಯಾಗುವ ಗ್ರಾಮ / ವಾರ್ಡಗಳಲ್ಲಿ ಫೀವರ್ ಕ್ಲಿನಿಕ್‌ಗಳನ್ನು ತೆರೆದು, ಅಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ. ಡೆಂಗ್ಯೂ ಜ್ವರವೆಂದು ಖಾತ್ರಿ ಪಡಿಸಿಕೊಳ್ಳಲು ಲಕ್ಷಣಗಳಿರುವ ರೋಗಿಗಳ ರಕ್ತ ಮಾದರಿಗಳನ್ನು ಉಚಿತವಾಗಿ ಪರೀಕ್ಷೆ ಮಾಡಲಾಗುತ್ತಿದೆ.<br>10. ರೋಗ ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆಯನ್ನು ಉಚಿತವಾಗಿ ನೀಡಲು ಸರ್ಕಾರಿ ಸಂಸ್ಥೆಗಳಲ್ಲಿ ಔಷಧ ಸಾಮಗ್ರಿಗಳನ್ನು ಲಭ್ಯವಿರಿಸಲಾಗಿದೆ.<br>11. ಡೆಂಗ್ಯೂ ಜ್ವರವನ್ನು ತಡೆಯಲು ಸಮುದಾಯದಲ್ಲಿ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯವನ್ನು ನಿರಂತರವಾಗಿ ಮಾಡಲಾಗುತ್ತಿದೆ.<br><br>ಡೆಂಗ್ಯೂ ನಿಯಂತ್ರಣದ ಸಂಬಂಧ ಆರ್ಥಿಕ ವರ್ಷ 2023-24ನೇ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದ ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದ (ಎನ್.ವಿ.ಬಿ.ಡಿ.ಸಿ.ಪಿ) ಅಡಿಯಲ್ಲಿ ರೂ.586.55 ಲಕ್ಷಗಳನ್ನು ನಿಯಮಾನುಸಾರ ವೆಚ್ಚ ಮಾಡಲಾಗಿರುತ್ತದೆ. ಈಡಿಸ್ ಲಾರ್ವಾ ನಿರ್ಮೂಲನಾ ಚಟುವಟಿಕೆಗೆ ರೂ.892.94 ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ಒಟ್ಟು ರೂ.1479.49 ಲಕ್ಷಗಳು ವೆಚ್ಚವಾಗಿರುತ್ತದೆ. |
| ಇ | ಡೆಂಗ್ಯೂ ಪೀಡಿತ ರೋಗಿಗಳಿಗೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಲಭ್ಯವಿದೆಯೇ; ರಾಜ್ಯಾದ್ಯಂತ ಖಾಸಗಿ ಆಸ್ಪತ್ರೆಗಳಲ್ಲೂ ಈ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡುವ ಕುರಿತು ಸರ್ಕಾರದ ನಿಲುವೇನು? | ಡೆಂಗ್ಯೂ ಜ್ವರ ಪ್ರಕರಣಗಳ ಪರೀಕ್ಷೆ, ಚಿಕಿತ್ಸೆ ಹಾಗೂ ನಿರ್ವಹಣೆಯ ಸೌಲಭ್ಯಗಳನ್ನು (ICU, ಅಗತ್ಯವಿದ್ದಲ್ಲಿ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಸಂಪೂರ್ಣ ಉಚಿತವಾಗಿ ಒದಗಿಸಲಾಗುತ್ತಿದೆ (BPL & APL ವರ್ಗದವರಿಗೆ).<br><br>ರಾಜ್ಯ ಸರ್ಕಾರವು ರಾಜ್ಯದ ಜನತೆಗೆ ಸಾರ್ವತ್ರಿಕ ಆರೋಗ್ಯ ರಕ್ಷಣೆ ಒದಗಿಸುವ ಉದ್ದೇಶದಿಂದ ಯುನಿವರ್ಸಲ್ ಹೆಲ್ತ್ ಸ್ಕೀಮ್ ಆದ "ಆಯುಷ್ಮಾನ್ ಭಾರತ – ಆರೋಗ್ಯ ಕರ್ನಾಟಕ" ಯೋಜನೆಯನ್ನು ಜಾರಿಗೊಳಿಸಿರುತ್ತದೆ.<br><br>ಬಿಪಿಎಲ್ ಪಡಿತರ ಕಾರ್ಡ್ ಹೊಂದಿರುವ ಕುಟುಂಬಕ್ಕೆ ಒಂದು ವರ್ಷಕ್ಕೆರೂ. 5 ಲಕ್ಷಗಳವರೆಗೆ ಉಚಿತ ಚಿಕಿತ್ಸೆ ಲಭ್ಯವಿದೆ, ಎಪಿಎಲ್ ಕಾರ್ಡ್ ದಾರರು ಅಥವಾ ಬಿಪಿಎಲ್ |

| | | |
|---|---|---|
| | | ಕಾರ್ಡ್ ಹೊಂದಿಲ್ಲದವರಿಗೆ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟು ಚಿಕಿತ್ಸಾ ವೆಚ್ಚವನ್ನು ಸರ್ಕಾರದ ವತಿಯಿಂದ ಸುವರ್ಣಾ ಆರೋಗ್ಯ ಸುರಕ್ಷ ಟ್ರಸ್ಟ್ ಭರಿಸುತ್ತದೆ. ಉಳಿದ 70% ರಷ್ಟು ಚಿಕಿತ್ಸಾ ವೆಚ್ಚವನ್ನು ಫಲಾನುಭವಿಗಳೇ ಭರಿಸಬೇಕಾಗಿರುತ್ತದೆ. ವಾರ್ಷಿಕ ಮಿತಿಯು ಪ್ರತಿ ಎಪಿಎಲ್ ಕುಟುಂಬಕ್ಕೆ ರೂ.1.50 ಲಕ್ಷವಿರುತ್ತದೆ.<br><br>ಈ ಯೋಜನೆಯಡಿ ಒಟ್ಟು 1650 ಚಿಕಿತ್ಸಾ ವಿಧಾನಗಳು ಲಭ್ಯವಿದ್ದು 171 ತುರ್ತು ಚಿಕಿತ್ಸೆಗಳಿಗೆ ಯಾವುದೇ ರೆಫರಲ್ ಇಲ್ಲದೆ ನೇರವಾಗಿ ನೊಂದಾಯಿತ (ಸರ್ಕಾರಿ ಅಥವಾ ಖಾಸಗಿ) ಆಸ್ಪತ್ರೆಗೆ ದಾಖಲಾಗಿ ಒಳರೋಗಿಯಾಗಿ ಉಚಿತ ವೈದ್ಯಕೀಯ ಚಿಕಿತ್ಸೆ ಪಡೆಯಬಹುದು. ಈ ಯೋಜನೆಯಲ್ಲಿ ಯಾವುದೇ ವಯಸ್ಸಿನ ಮಿತಿಯಿರುವುದಿಲ್ಲ. |

**ಆಕುಕ 90 ಎಸ್ಎಂಎಂ 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

## ಅನುಬಂಧ -1

ಡೆಂಗಿ ಪ್ರಕರಣಗಳ ಜಿಲ್ಲಾವಾರು ವಿವರವು
ದಿನಾಂಕ 01.01.2024 ರಿಂದ 30.06.2024 ರ ವರೆಗೆ ಈ ಕೆಳಕಂಡಂತಿದೆ.

| Sl.No | Districts | Dengue cases upto June 2024 |
|---|---|---|
| 1 | Chikkamagaluru | 491 |
| 2 | Mysuru | 431 |
| 3 | Haveri | 402 |
| 4 | Shivamogga | 283 |
| 5 | Chitradurga | 253 |
| 6 | Dakshina Kannada | 233 |
| 7 | Hassan | 198 |
| 8 | Mandya | 189 |
| 9 | Udupi | 180 |
| 10 | Tumakuru | 169 |
| 11 | Dharwada | 168 |
| 12 | Vijayapura | 166 |
| 13 | Kalaburagi | 153 |
| 14 | Belagavi | 141 |
| 15 | Davanagere | 131 |
| 16 | Uttara kannada | 109 |
| 17 | Kodagu | 94 |
| 18 | Koppal | 89 |
| 19 | Ballari | 79 |
| 20 | Chikkaballapura | 71 |
| 21 | Chamarajanagar | 54 |
| 22 | Ramanagar | 53 |
| 23 | Bagalkote | 53 |
| 24 | Gadag | 47 |
| 25 | Kolar | 43 |
| 26 | Bidar | 42 |
| 27 | Raichur | 32 |
| 28 | Bangaluru (U) | 21 |
| 29 | Vijaya nagar | 19 |
| 30 | Bangaluru (R) | 15 |
| 31 | Yadagiri | 4 |
| | State | 4413 |
| | BBMP | 1563 |
| | Grand total | **5976** |



Generated from eOffice by SATISH BAGAPPA HANGARAGI, HFW-ASST2(SBH) HEALTH1, ASSISTANT, HEALTH AND FAMILY WELFARE SEC on 25/07/2024 12:55 PM